ಕೃಷಿಗೆ ಸಾಲ ಪೂರೈಸುವಲ್ಲಿ ನಾಟಕ ಹೋಲುವ ಪ್ರಯೋಗಗಳಾದರೆ ಸಾಲಮನ್ನಾ ಮಾಡುವಲ್ಲಿ ನಾಟಕೀಯ ಪ್ರಯೋಗಗಳಾಗಿವೆ. 1970 ಮತ್ತು 1980ರ ದಶಕಗಳಲ್ಲಿ ರೈತರ ಮೂಲ ಸಮಸ್ಯೆಗಳನ್ನು ಪರಿಹರಿಸಲು ವಿಫಲವಾದ ರಾಜ್ಯ ಸರಕಾರಗಳು ಅವಧಿ ಮೀರಿದ ಸಹಕಾರಿ ಸಾಲಗಳನ್ನು ರೈತರ ಮತ ಸೆಳೆಯಲು ಮನ್ನಾ ಮಾಡುವ ಹವ್ಯಾಸ ಬೆಳೆಸಿಕೊಂಡವು. ಇದರಿಂದ ಸಾಲ ಮರುಪಾವತಿ ಮಾಡುವ ರೈತ ಸಮುದಾಯದ ಸಂಸ್ಕೃತಿಗೆ ಧಕ್ಕೆಯಾಗಿದೆ. ಆರನೇ ಪಂಚವಾರ್ಷಿಕ ಯೋಜನೆಯ (1980-85) ದಾಖಲೆ ಪತ್ರ ಸಾಲಮನ್ನಾ ಯೋಜನೆಗಳನ್ನು ಸಾರದಂತೆ ನೀಡಿದ ಎಚ್ಚರಿಕೆಯನ್ನು ರಾಜ್ಯ ಸರಕಾರಗಳು ಲೆಕ್ಕಕ್ಕೇ ತೆಗೆದುಕೊಳ್ಳಲಿಲ್ಲ. ಏಳನೇ ಯೋಜನೆ ಸಹ ಸಾಲಮನ್ನಾ ಪರಿಪಾಠ ಮುಂದುವರಿಸಿದರೆ ಆಗುವ ಅನಾಹುತದ ಬಗೆಗೆ ನೀಡಿದ ವಾರ್ನಿಂಗ್‌ನ್ನು ರಾಜ್ಯ ಸರಕಾರಗಳು ಸುರಕ್ಷಿತ ನಿರ್ಲಕ್ಷಿಸಿದವು. 1990ರಲ್ಲಿ ಕೇಂದ್ರ ಸರಕಾರವೇ ಆಸಕ್ತಿ ವಹಿಸಿ ಕೃಷಿ ಮತ್ತು ಗ್ರಾಮೀಣ ಸಾಲಮನ್ನಾ ಯೋಜನೆಯನ್ನು ಘೋಷಿಸಿದಾಗ ಪ್ರಮಾದಗಳ ಸರಪಳಿಯ ನಿರ್ಮಾಣ ಉದ್ದೇಶಪೂರ್ವಕವಾಗಿ ಶ್ರೀಮಂತ ರೈತರು ಕಟ್ಟುಬಾಕಿದಾರರಾದರು. ಸಹಕಾರಿ ಸಂಘಗಳು, ಸಾರ್ವಜನಿಕ ರಂಗದ ಬ್ಯಾಂಕುಗಳು ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ನೀಡಿದ ಸಾಲಗಳ ಮರುಪಾವತಿಯಾಗದೆ ಅವು ವಾತರೋಗದಿಂದ ಬಳಲುವಂತಾಯಿತು.

2008-09ರ ಕೇಂದ್ರ ಬಜೆಟ್‌ನಲ್ಲಿ ಘೋಷಣೆಯಾದ ಸಾಲಮನ್ನಾ ಯೋಜನೆ ಒಂದು ಅಂದಾಜಿನ ಪ್ರಕಾರ 52,516 ಕೋಟಿ ರೂ. ಗಳನ್ನು ಒಳಗೊಂಡಿತ್ತು. ಐದು ವರ್ಷಗಳ ನಂತರ ಅದರ ವೈಫಲ್ಯಗಳು ಬೆಳಕಿಗೆ ಬಂದವು. 2013ರ ಮಹಾ ಲೇಖಪಾಲರ (ಸಿಎಜಿ) ವರದಿ ತಿಳಿಸಿದಂತೆ ಕೃಷಿಯೇತರ ಉದ್ದೇಶಗಳಿಗಾಗಿ ರೈತರು ಪಡೆದುಕೊಂಡಿರುವ ಸಾಲಗಳನ್ನು ಅಥವಾ ಮನ್ನಾ ಆಗುವ ಅರ್ಹತೆಯಿಲ್ಲದ ಕೃಷಿಸಾಲಗಳನ್ನು ಈ ಯೋಜನೆಯಡಿಯಲ್ಲಿ ಮನ್ನಾ ಮಾಡಲಾಗಿತ್ತು. ಇದೇ ವೇಳೆ ಮನ್ನಾ ಮಾಡಬೇಕಾದ ಅನೇಕ ಸಾಲಗಳನ್ನು (ಸಣ್ಣ ಮತ್ತು ಅತಿ ಸಣ್ಣ ರೈತರ ಸಾಲಗಳೂ ಸೇರಿದಂತೆ) ಬ್ಯಾಂಕುಗಳು ಪರಿಗಣಿಸಿಯೇ ಇರಲಿಲ್ಲ. ಸಾಲಮನ್ನಾ ನಿಯಮಾವಳಿಯನ್ನು ಉಲ್ಲಂಘಿಸಿ ಸರ್ಕಾರಿ ಬ್ಯಾಂಕುಗಳೇ ಸರ್ಕಾರದಿಂದ ಸಾಕಷ್ಟು ಮೊತ್ತವನ್ನು ಪರಿಹಾರ ರೂಪದಲ್ಲಿ ಕಬಳಿಸಿದ್ದವು!

2014ರ ಡಿಸೆಂಬರ್ ತಿಂಗಳಿನಲ್ಲಿ 70ನೇ ಸುತ್ತಿನ ರಾಷ್ಟ್ರೀಯ ಮಾದರಿ ಸಮೀಕ್ಷೆಯ ವರದಿ ಶೇ. 50ರಷ್ಟು ರೈತ ಕುಟುಂಬಗಳು ಸಾಲದಲ್ಲಿ ಮುಳುಗಿದ್ದನ್ನು ಪ್ರಚುರಪಡಿಸಿತ್ತು. ಅಲ್ಲಿಗೆ ಸಾಲಮನ್ನಾ ಯೋಜನೆಗಳಿಂದ ರೈತರಿಗೆ ಸಿಗಬೇಕಾದ ಲಾಭ ಸಿಗಲಿಲ್ಲವೆನ್ನುವುದು ಸ್ಪಷ್ಟವಾಯಿತು.

ಸಾಲಮನ್ನಾ ಒಂದು ಶಾಶ್ವತ ಪರಿಹಾರವಲ್ಲವೆನ್ನುವುದಕ್ಕೆ ಸಾಲಮನ್ನಾ ಆದ ನಂತರವೂ ಮುಂದುವರಿದ ರೈತರ ಆತ್ಮಹತ್ಯೆಗಳು ಸಾಕ್ಷಿ. ನಮ್ಮ

ರೈತರು ಸ್ವಭಾವತಃ ಸ್ವಾಭಿಮಾನಿಗಳು. ರೈತರ ಬದುಕು ಹಸನಾದರೆ ಖಂಡಿತ ಅವರು ಸಾಲಮನ್ನಾ ಬೇಡಿಕೆಯನ್ನು ಇಡುವುದಿಲ್ಲ. ರೈತರ ಸಾಲಮನ್ನಾ ರಾಜಕೀಯದ ವಿರಾಟ ರೂಪ (ವಿಕಾರ ರೂಪ) ನೋಡಲು ಈಗ ದೂರ ಹೋಗಬೇಕಾಗಿಲ್ಲ. ಕರ್ನಾಟಕದಲ್ಲೇ ಉಳಿದರೆ ಸಾಕು. ದೈನಿಕಗಳಲ್ಲಿ ಆಗಾಗ ಮೂಡಿಬರುತ್ತಿರುವ ರಾಜಕೀಯ ಪಕ್ಷಗಳ ಭರ್ಜರಿ ಭರವಸೆಗಳನ್ನು ಸರಕಾರದ ಜಾಹೀರಾತುಗಳನ್ನು ಗಮನಿಸಬಹುದು. ದೂರದರ್ಶನದ ಕೆಲವು ಚಾನೆಲ್‌ಗಳನ್ನು ಒಮ್ಮೆ ವೀಕ್ಷಿಸಿದರೂ ಜುಗುಪ್ಸೆ ಹುಟ್ಟುತ್ತದೆ. ರೈತರನ್ನು ತೀರ ಹಗುರವಾಗಿ ಕಾಣುವ ಅಪಾಯಕಾರಿ ಪ್ರವೃತ್ತಿ ಬೆಳೆಯುತ್ತಿದೆ ನಮ್ಮ ರಾಜ್ಯದಲ್ಲಿ, ಛೇ!

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಕಳೆದ ಡಿಸೆಂಬರ್ ತಿಂಗಳಿನಲ್ಲಿ ನೀಡಿದ ಮಾಹಿತಿ ರೈತರ ಪ್ರತಿಭಟನೆ ಹೆಚ್ಚುತ್ತಿರುವುದಕ್ಕೊಂದು ಪುರಾವೆ. 2012-16ರ ಅವಧಿಯಲ್ಲಿ ರೈತರು ರಸ್ತೆಗಿಳಿದು ನಡೆಸಿದ ಪ್ರತಿಭಟನೆಗಳ ಸಂಖ್ಯೆ ಎಂಟುಪಟ್ಟು ಜಾಸ್ತಿಯಾಯಿತು. ಇದೇ ಸಂಖ್ಯೆಯನ್ನು ಮಾನದಂಡವಾಗಿಟ್ಟು ಹೇಳುವುದಾದರೆ ಬಿಹಾರ, ಉತ್ತರ ಪ್ರದೇಶ ಮತ್ತು ಕರ್ನಾಟಕ ಮೊದಲ ಮೂರು ಸ್ಥಾನ ಪಡೆದ ರಾಜ್ಯಗಳಾಗಿವೆ. ರೈತರ ಬೆಳೆಗೆ ಸರಿಯಾದ ಬೆಲೆ ಸಿಗದಿರುವುದು ಮತ್ತು ಸಾಲದ ಹೊರೆ ರೈತ ಪ್ರತಿಭಟನೆ ಹೆಚ್ಚಾಗಲು ಕಾರಣ ಎಂದು ಬ್ಯೂರೋ ವರದಿ ಮಾಡಿದೆ. ರೈತರು ಕಡಿಮೆ ಬೆಳೆದರೆ ಅವರಿಗೆ ದುಭೀಕ್ಷ. ಹೆಚ್ಚು ಬೆಳೆದರೆ ಬೆಲೆಗಳು ಕುಸಿಯುವುದರಿಂದ ಅವರಿಗೆ ದುರ್ಗತಿ. ಕೃಷಿ ಕೆಲಸ ಬಿಟ್ಟು ಬೀದಿಗಿಳಿದು ಲಾಠಿ ಏಟು ತಿನ್ನಲು ತಯಾರಾದರೆ ಮಾತ್ರ ರೈತರ ಮೊರೆ ದೊರೆಗೆ ಕೇಳಿಸುತ್ತದೆ. ಬೆಂಬಲ ಬೆಲೆ ನಿಗದಿಯಾದರೆ ಅದು ಅಪವಾದ. ರೈತರಿಗೆ ನೆರವಾಗಬೇಕಾದ ಎ. ಪಿ. ಎಂ. ಸಿಗಳೇ ಸಮಸ್ಯೆ ಸೃಷ್ಟಿಸಿದ ನಿದರ್ಶನಗಳಿವೆ ಮೋದಿ ಸರಕಾರ ಕೃಷಿ ಹುಟ್ಟುವಳಿಗಳ ಮಾರಾಟದಲ್ಲಿ ಆಧುನಿಕ ತಂತ್ರಜ್ಞಾನಾಧಾರಿತ ಸುಧಾರಣೆ ತರಲು ರಾಷ್ಟ್ರಮಟ್ಟದಲ್ಲಿ ಬಜೆಟ್ ಮೂಲಕ ಯೋಜನೆ ಹೆಣೆಯುತ್ತಿರುವುದು ಒಂದು ಸ್ವಾಗತಾರ್ಹ ಬೆಳವಣಿಗೆ. ಅದರ ಲಾಭ ಸಾಮಾನ್ಯ ರೈತರಿಗೂ ಲಭ್ಯವಾಗಿ ನ್ಯಾಯಯುತವಾದ ಬೆಲೆ ಸಿಗುವಂತಾದರೆ ರೈತರ ಬದುಕಿನಲ್ಲಿ ಸ್ವಲ್ಪ ಬೆಳಕು ತಡವಾಗಿಯಾದರೂ ಮೂಡಲಿದೆ.

ಶ್ರೀಮಂತ ರಾಷ್ಟ್ರವಾದ ಅಮೇರಿಕೆಯಲ್ಲೂ ಬಡವರಿದ್ದಾರೆ. ಕೆಲವು ಶರತ್ತುಗಳಿಗೊಳಪಟ್ಟು ಅಲ್ಲಿಯ ಫೆಡರಲ್ ವ್ಯವಸ್ಥೆಯಲ್ಲಿರುವ ಸರಕಾರಗಳು ಬಡವರಿಗೆ ಆಹಾರ ಪದಾರ್ಥಗಳನ್ನು ಉಚಿತವಾಗಿ ಪೂರೈಸುತ್ತದೆ. ಈ ಉಚಿತ ಆಹಾರ ಪೂರೈಕೆ ಯೋಜನೆ ಅಲ್ಲಿಯ ಕೃಷಿಕರ ಹಿತಾಸಕ್ತಿಗಳನ್ನು ರಕ್ಷಿಸುವ ರೀತಿಯಲ್ಲಿ ಸಾಗುತ್ತದೆ. ಹೆಚ್ಚು ಬೆಳೆದು ರೈತರು ತೊಂದರೆಗೆ ಸಿಲುಕದಂತೆ ಸರಕಾರ ಅವರು ಉತ್ಪಾದಿಸಿದ ಆಹಾರ ವಸ್ತುಗಳನ್ನು ಯೋಗ್ಯ ಬೆಲೆಯಲ್ಲಿ ಖರೀದಿಸಿ ಆಹಾರ ಪೂರೈಕೆ ಯೋಜನೆಯಡಿಯಲ್ಲಿ ಬಡ ಕುಟುಂಬಗಳಿಗೆ ಕಾಲಕಾಲಕ್ಕೆ ಪೂರೈಸುತ್ತದೆ. ನಮ್ಮ ಕರ್ನಾಟಕದಲ್ಲಿ ಅಬ್ಬರದ ಪ್ರಚಾರದಲ್ಲಿರುವ ಭಾಗ್ಯಗಳ ಯೋಜನೆಗೂ, ರೈತರ ಹಿತಾಸಕ್ತಿಗಳಿಗೂ ಯಾವ ಸಂಬಂಧವಿದೆ ಹೇಳಿ? ಈ ವರ್ಷ ಟೊಮೆಟೋ ಹೆಚ್ಚು ಬೆಳೆದ ನಾಡಿನ ರೈತರ ಕಷ್ಟ ಅಷ್ಟಿಷ್ಟಲ್ಲ. ರೈತರಿಗೆ ಸರಕಾರಗಳು ಈ ತನಕ ಏನನ್ನೂ ಕೊಟ್ಟಿಲ್ಲವೆಂದು ಅರ್ಥೈಸಬೇಕಾಗಿಲ್ಲ. ಕೃಷಿಕರ ಮತದ ಮೇಲೆ ಕಣ್ಣಿಟ್ಟ ಸರಕಾರಗಳು ಅಷ್ಟಿಟ್ಟು ಸಬ್ಸಿಡಿಗಳನ್ನು, ರಿಯಾಯತಿಗಳನ್ನು, ವಿನಾಯತಿಗಳನ್ನು ಮತ್ತು ಕೆಲವು ಪ್ರಶಸ್ತಿಗಳನ್ನು ನೀಡಿದ್ದುಂಟು. ಆದರೆ ಇದು ಒಂದು ದೊಡ್ಡ ಪರಿಹಾರ, ದೊಡ್ಡ ಸಾಧನೆ ಅಥವಾ ಅನ್ನದಾತರಿಗೆ ನೀಡಿದ ಸೇವೆ ಎಂದರೆ ಮಾತ್ರ ಅದು ಒಪ್ಪತಕ್ಕ ವಿಚಾರ ಅಲ್ಲವೇ ಅಲ್ಲ. ದಶಕಗಳ ಹಿಂದೆಯೇ ನೇಗಿಲಯೋಗಿಯ ಸ್ಥಿತಿಗತಿಯನ್ನು ಕುವೆಂಪು ಕಂಡು ಮರುಗಿದ್ದರು. ಅವರು ಒಂದೆಡೆ ಬರೆದು ತಿಳಿಸಿದಂತೆ ಆಗಲೇ ಅನೇಕ ರೀತಿ ಭೋಗದ ಮತ್ತು ಷೋಕಿಯ ವಸ್ತುಗಳ ತಯಾರಿಕೆಗೆ ತೆರಿಗೆ ಹಣವನ್ನು ವ್ಯಯ ಮಾಡಲಾಗಿತ್ತು. ಪಟ್ಟಣಗಳಲ್ಲಿ, ನಗರಗಳಲ್ಲಿ ಭೋಗ ಜೀವನ ನಡೆಸುವ ಶ್ರೀಮಂತರ ಸುಖಕ್ಕಾಗಿ ಹಳ್ಳಿಗಳನ್ನೂ, ರೈತವರ್ಗವನ್ನೂ ಮರೆಯಲಾಗಿತ್ತು. ಕುವೆಂಪು ಮಾರ್ಮಿಕವಾಗಿ ಬರೆದದ್ದು ಹೀಗೆ - 'ಅಥವಾ ಮರೆತೇ ಬಿಟ್ಟಿವು ಎಂಬ ದೂರಿನಿಂದ ಪಾರಾಗುವುದಕ್ಕಾಗಿ ನಿರ್ಜೀವವಾದರೆ ನಮಗಾಗಿ ದುಡಿವವರು ಯಾರೂ ಇಲ್ಲದಂತೆ ಆಗಬಾರದು ಎಂದೋ ಜೀವವಾಡುವಷ್ಟರ ಮಟ್ಟಿಗೆ ಅವರ ಭಿಕ್ಷಾಪಾತ್ರೆಗೆ ಕಾಸು ಎಸೆದದ್ದೂ ಉಂಟು' ಇತಿಮಿತಿಯಿಲ್ಲದ ಸಾಲಮನ್ನಾ ರಾಜಕೀಯ ಕುವೆಂಪು ನಾಡಿನಲ್ಲೇ ನಡೆಯುತ್ತಿರುವಾಗ, ಅವರು ಬಹಳ ಹಿಂದೆ ಬರೆದದ್ದು ಈಗಲೂ ಜೀವಂತ ಉಳಿದಂತೆ ತೋರುತ್ತದೆ. ಕೃಷಿಕನ ಜೀವಕ್ಕೆ ಬೆಲೆ ಇಲ್ಲವಾದರೂ!

ಕುವೆಂಪು ಅವರಂತೆ ರೈತರ ಬಗ್ಗೆ ಅಪಾರ ಅನುಕಂಪ ಹೊಂದಿದ್ದ ಅರ್ಥಶಾಸ್ತ್ರಜ್ಞ ಡಿ. ಎಂ. ನಂಜುಂಡಪ್ಪ 1999ರಲ್ಲಿ ಮೂರು ಅಂಗಗಳುಳ್ಳ ಸಮಗ್ರ ಗ್ರಾಮೀಣ ಬ್ಯಾಂಕಿಂಗ್ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿದ್ದರು. 1. ಕೃಷಿಗೆ ಉದ್ದಿಮೆಯ ಸ್ಥಾನಮಾನ ನೀಡಿ ಈ ರಂಗದ ಪ್ರಗತಿಗೆ ಬೇಕಾದ ವಾತಾವರಣದ ಸೃಷ್ಟಿ. 2. ಶೇ 5-6 ರಷ್ಟು ಕೃಷಿ ಬೆಳವಣಿಗೆ ಸಾಧಿಸಲು ಈ ರಂಗದಲ್ಲಿ ಸಾರ್ವಜನಿಕ ಹೂಡಿಕೆಯಲ್ಲಿ ಗಣನೀಯ ಹೆಚ್ಚಳ ಮತ್ತು 3. ಕೃಷಿಕರ ಎಲ್ಲಾಸಾಲದ ಅಗತ್ಯಗಳನ್ನು ಪೂರೈಸಲು ಏಕ ಗವಾಕ್ಷಿ ವ್ಯವಸ್ಥೆ. ಸಾಲಮನ್ನಾ ರಾಜಕೀಯ ನೆಚ್ಚಿಕೊಂಡು ಸರಕಾರ ನಡೆಸುವವರು ನಂಜುಂಡಪ್ಪನವರ ಸಲಹೆಗೆ ಕಿವಿಗೊಡಲಿಲ್ಲ. ಹೇಗೂ ಸಾಲಮನ್ನಾ ಔದಾರ್ಯ ಪ್ರದರ್ಶನವಾದಾಗ ಹೋಗುವುದು ಸಾರ್ವಜನಿಕ ಹಣ ತಾನೇ?

ಕೃಷಿ ಸುಧಾರಣೆಗೆ ಕಾರಣವಾಗದ ಭೂ ಸುಧಾರಣೆಗಳು

ಭೂಸುಧಾರಣೆಗಳು ಸರಿಯಾಗಿ ರೂಪುಗೊಂಡು ಜಾರಿಯಾದರೆ ಅವು ಕೃಷಿ ಅಭಿವೃದ್ಧಿಯ ಸಾಧನವಾಗಬಲ್ಲವೆಂಬ ಸತ್ಯವನ್ನು ಇತಿಹಾಸ ಸಾರಿ ಹೇಳುತ್ತದೆ. ಜಪಾನ್ ಮತ್ತು ತೈವಾನ್ ದೇಶಗಳ ಅನುಭವ ಸಾಕ್ಷಿಯಾಗುತ್ತದೆ. ಸ್ವಾತಂತ್ರ್ಯಾ ನಂತರ ಜಾರಿಗೆ ಬಂದ ದೋಷಪೂರಿತ ಭೂಸುಧಾರಣಾ ಕಾನೂನುಗಳು, ಅನುಷ್ಠಾನದ ಹಂತದಲ್ಲಿ ಆದ ಪ್ರಮಾದಗಳು ನಮ್ಮ ದೇಶದಲ್ಲಿ ಕೃಷಿರಂಗಕ್ಕೆ ಶಾಪವಾಗಿವೆ. ಕೆಲವೇ ರಾಜ್ಯಗಳಲ್ಲಿ (ಕೇರಳ, ಕರ್ನಾಟಕ, ಗುಜರಾತ್, ಹಿಮಾಚಲ ಪ್ರದೇಶ ಮತ್ತು ಪಶ್ಚಿಮ ಬಂಗಾಲ) ಗೇಣಿ ಶಾಸನಗಳು ಬಹುಮಟ್ಟಿಗೆ ಯಶಸ್ವಿಯಾಗಿವೆ. ಭೂಮಿತಿ ಶಾಸನಗಳಂತೂ ವಾಸ್ತವದಲ್ಲಿ ಮಿತಿಗಳ ಶಾಸನಗಳಾಗಿ ಪರ್ಯಾವಸಾನಗೊಂಡಿವೆ. ಯಾವ ಘನ ಉದ್ದೇಶವೂ ಈ ಶಾಸನಗಳಿಂದ ಈಡೇರದೆ ಹೋಯಿತು. ಪ್ರಯೋಗಗಳಲ್ಲೇ,ವರದಿಗಳ ಪ್ರಕಟಣೆಗಳಲ್ಲೇ ವರ್ಷಗಳು ಉರುಳಿ ಉರುಳಿ ಹೋದವು.

2012 ಅಕ್ಟೋಬರ್ 2 ರಂದು 60,000 ಭೂರಹಿತ ಕಾರ್ಮಿಕರು ಭೂಸುಧಾರಣೆಯ ಬೇಡಿಕೆಯನ್ನು ಮುಂದಿಟ್ಟುಕೊಂಡು ಗ್ವಾಲಿಯರ್‌ನಿಂದ ಜಾಥಾ ಪ್ರಾರಂಭಿಸಿದರು. ನವದೆಹಲಿ ತಲುಪಿ ತಮ್ಮ ಬೇಡಿಕೆಯತ್ತ ಕೇಂದ್ರ ಸರಕಾರದ ಗಮನಸೆಳೆಯುವುದು ಅವರ ಉದ್ದೇಶವಾಗಿತ್ತು. ಬೃಹತ್ ಜಾಥಾ ಯುಪಿಎ ಸರಕಾರವನ್ನು ನಡುಗಿಸಿಬಿಟ್ಟಿತು. ಪ್ರಧಾನಿ ಪರವಾಗಿ ಆಗಿನ ಗ್ರಾಮಾಭಿವೃದ್ಧಿ ಸಚಿವ ಜೈರಾಮ್ ರಮೇಶ್ ಜನ ಸತ್ಯಾಗ್ರಹಿಗಳ ಜೊತೆಗೆ

ಅಕ್ಟೋಬರ್ 11ರಂದು ಒಪ್ಪಂದ ಮಾಡಿಕೊಂಡರು. ಮುಂದಿನ ಆರು ತಿಂಗಳೊಳಗಾಗಿ ಪ್ರಗತಿಪರ ಭೂಸುಧಾರಣೆಗಳನ್ನು ರೂಪಿಸಲು ರಾಜ್ಯಗಳಿಗೆ ಬೇಕಾದ ಮಾರ್ಗದರ್ಶಿ ಸೂತ್ರಗಳನ್ನು ಪೂರೈಸಲು ಕೇಂದ್ರ ಸರಕಾರ ಒಪ್ಪಿಕೊಂಡಿತ್ತು. ಸಮಿತಿಯೊಂದನ್ನು ರಚಿಸಿತ್ತಾದರೂ ಸಮಿತಿ ಆಳವಾದ ಅಧ್ಯಯನದ ಬೆಳಕಿನಲ್ಲಿ ಮಹತ್ವದ ಶಿಫಾರಸ್ಸುಗಳನ್ನು ಮಾಡಿತ್ತಾದರೂ 2014ರ ಲೋಕಸಭಾ ಚುನಾವಣೆ ಸಮೀಪಿಸಿದ್ದರಿಂದ ಹೆಚ್ಚಿನ ಪ್ರಗತಿಯಾಗಲಿಲ್ಲ. ಮೋದಿ ಸರಕಾರ ಬಂದ ಮೇಲೆ ನೀತಿ ಆಯೋಗ ಕೃಷಿ ಸಂಪನ್ಮೂಲಗಳ ಬಳಕೆಗಾಗಿ ಕೃಷಿ ಉತ್ಪಾದಕತೆ ಹೆಚ್ಚಿಸುವ ಉದ್ದೇಶದಿಂದ ನೀತಿ-ನ್ಯಾಯ ತಳಹದಿಯುಳ್ಳ ಮಾದರಿ ಗೇಣಿ ಶಾಸನಕ್ಕೆ ಬೇಕಾದ ಶಿಫಾರಸ್ಸುಗಳನ್ನು ಮಾಡಿತು. ಕೇಂದ್ರ ಸರಕಾರ 2016ರಲ್ಲಿ ಮಾದರಿ ಗೇಣಿ ಮಸೂದೆಯನ್ನು ರೂಪಿಸಿ ರಾಜ್ಯಗಳಿಗೆ ಕಳುಹಿಸಿದೆ. ಭೂಸುಧಾರಣೆ ಮುಗಿದುಹೋದ ಅಧ್ಯಾಯವೆಂದು ಭಾವಿಸಬೇಕಾಗಿಲ್ಲ. ಗೇಣಿ ಅಂದಾಕ್ಷಣ ಮೂಗು ಮುರಿಯಬೇಕಾಗಿಲ್ಲ. ಶೋಷಣೆ ರಹಿತ ಗೇಣಿ ಸಾಧ್ಯವೆನ್ನುವುದು ಹಲವು ಮುಂದುವರಿದ ರಾಷ್ಟ್ರಗಳ ಅನುಭವ. ಕಾರ್ಮಿಕರ ಅಭಾವ ವಿರುವಾಗ, ಕೃಷಿ ಭೂಮಿ ಸಾಗುವಳಿ ಮಾಡುವುದೇ ಸಮಸ್ಯೆಯಾಗಿರುವಾಗ, ಸಾವಿರಾರು ಹೆಕ್ಟೇರು ಭೂಮಿ ಅನೇಕ ವರ್ಷಗಳಿಂದ ಕರ್ನಾಟಕ ರಾಜ್ಯವೊಂದರಲ್ಲೇ ಸಾಗುವಳಿಯಾಗದೇ ಬಿದ್ದಿರುವಾಗ ನೈಜ ದೃಷ್ಟಿಕೋನವುಳ್ಳ ಗೇಣಿ ಪದ್ಧತಿ ಸ್ವಂತ ಸಾಗುವಳಿಗೆ ಸೂಕ್ತ ಪರ್ಯಾಯ ವ್ಯವಸ್ಥೆಯಾಗಲಿದೆ. ಚೀನಾ ಕೂಡ ತನ್ನ ನಿಲುವನ್ನು ಬದಲಿಸಿ ಈಗ ಕೃಷಿಯಲ್ಲಿ ಗೇಣಿ ವ್ಯವಸ್ಥೆಗೆ ಉತ್ತೇಜನ ನೀಡುತ್ತಿದೆ. ಕೇಂದ್ರ ಸರಕಾರ ಕಳುಹಿಸದ 2016ರ ಮಾದರಿ ಕಾನೂನಿನ ಆಧಾರದಲ್ಲಿ ರಾಜ್ಯಗಳು ತಮ್ಮ ಭೂಸುಧಾರಣಾ ಕಾನೂನುಗಳಲ್ಲಿ ತಿದ್ದುಪಡಿಗಳನ್ನು ಮಾಡಬೇಕು. ಕರ್ನಾಟಕದ ಕೃಷಿ ಸಚಿವ ಕೃಷ್ಣ ಭೈರೇಗೌಡ ಏಳೆಂಟು ತಿಂಗಳ ಹಿಂದೆ ತಿದ್ದುಪಡಿ ಮಾಡುವ ಬಗ್ಗೆ ಒಲವು ತೋರಿದ್ದರು. ನಂತರ ಸುದ್ದಿ ಇಲ್ಲ.

ಹವಾಮಾನ ಬದಲಾವಣೆ ಪ್ರಹಾರ ಮಾಡಿದ್ದು ಇನ್ನು ರೈತರು ಮಾಡಬೇಕಾಗಿದ್ದು

ದ್ವಿತೀಯ ಹಸಿರು ಕ್ರಾಂತಿಯ ಕನಸು ಕಾಣುತ್ತಿರುವ ದೇಶಕ್ಕೆ ಮತ್ತೊಂದು ದೊಡ್ಡ ಭೀತಿ ಎದುರಾಗಿದೆ. ಕೇಂದ್ರ ಹಣಕಾಸಿನ ವಿತ್ತ ಸಚಿವಾಲಯ ಪ್ರಕಟಿಸಿದ 2017-18ನೇ ಸಾಲಿನ ಆರ್ಥಿಕ ಸಮೀಕ್ಷೆ ಮುಂದಿನ ನಾಲ್ಕೈದು ವರ್ಷಗಳ ಅವಧಿಯಲ್ಲಿ ಪ್ರತಿಕೂಲವಾಗಲಿರುವ ಹವಾಮಾನ ಬದಲಾವಣೆಯಿಂದ ನೀರಾವರಿ ಸೌಲಭ್ಯವಿಲ್ಲದ ರೈತರ ಆದಾಯ ಶೇ. 20ರಿಂದ 25ರಷ್ಟು ಇಳಿಕೆಯಾಗಬಹುದೆಂದು ತಿಳಿಸಿರುವುದು ಕಳವಳಕಾರಿ ಸಂಗತಿ. ನೀರಾವರಿ ಇದ್ದ ಪ್ರದೇಶದಲ್ಲಿ ಆದಾಯ ಕುಸಿತ ಶೇ. 15ರಿಂದ 18 ರಷ್ಟಿರಬಹುದೆಂಬ ಅಂದಾಜು. ಕರ್ನಾಟಕದಲ್ಲಿ ಶೇ. 68ರಷ್ಟು ಸಾಗುವಳಿ ಕ್ಷೇತ್ರ ಮಳೆ ನೀರನ್ನೇ ಅವಲಂಬಿಸಿಕೊಂಡಿದೆ. ಕಳೆದ ನಾಲ್ಕೈದು ವರ್ಷಗಳಿಂದ ರಾಜ್ಯದಲ್ಲಿ ಬರಗಾಲದ ಪೀಡೆ ಇರುತ್ತಿದ್ದು ಹವಾಮಾನ ಬದಲಾವಣೆ ತನ್ನ ದಟ್ಟ ನೆರಳನ್ನು ಈಗಾಗಲೇ ಕಳಿಸಿದೆ. ರಾಜಕೀಯ ಶಕ್ತಿಗಳು ನೀಡಿದ ಗಾಯದ ಮೇಲೆ ಮುನಿಸಿಕೊಂಡ ನಿಸರ್ಗ ಎಲ್ಲಾ ರಾಜ್ಯಗಳಲ್ಲೂ ಬರೆ ಎಳೆಯುತ್ತಿದೆ. ಕೇಂದ್ರ, ರಾಜ್ಯ ಮತ್ತು ಸ್ಥಾನಿಕ ಸರಕಾರಗಳ ಪಾತ್ರಗಳನ್ನು ಸ್ಪಷ್ಟವಾಗಿ ತೋರಿಸುವ ದೀರ್ಘಕಾಲೀನ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸದಿದ್ದರೆ ದೇಶದ ಗಣನೀಯ ಪ್ರಮಾಣದ ಜನರು ಅವಲಂಬಿತವಾಗಿರುವ ಕೃಷಿ ಕ್ಷೇತ್ರಕ್ಕೆ ಘೋರ ಆಪತ್ತು ಬರಲಿದೆ.

ರೈತರ ಸಬಲೀಕರಣ ದೇಶದ ತುರ್ತು ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಎಲ್ಲವನ್ನೂ ರೈತರು ಸರಕಾರಿ ವಿಭಾಗಗಳಿಂದಲೇ ಅಪೇಕ್ಷಿಸಬಾರದು. ಕೃಷಿಯನ್ನು ರಕ್ಷಿಸಿದರೆ ಕೃಷಿ ತಮ್ಮನ್ನು ರಕ್ಷಿಸುತ್ತದೆಂಬ ಸರಳ ಸತ್ಯವನ್ನು ಅವರು ಮನ್ನಿಸಬೇಕು. ಅಂತರ್ಜಾಲ ವೃದ್ಧಿ, ನೆರೆ ನಿಯಂತ್ರಣ, ಅರಣ್ಯೀಕರಣ, ಮಣ್ಣಿನ ಶಕ್ತಿವರ್ಧನೆ, ಮಳೆ ಕೊಯ್ಲು, ಇಂಗುಗುಂಡಿಗಳ ನಿರ್ಮಾಣ, ನೀರಾವರಿ ಸೌಲಭ್ಯಗಳ ಬಳಕೆ, ಕೃಷಿ ಸಲಕರಣೆಗಳ ಉಪಯೋಗ, ಕೃಷಿಕಾರ್ಯಗಳ ನಿರ್ವಹಣೆ, ಬೆಳೆಗಳಿಗೆ ತಗಲುವ ರೋಗಗಳಿಗೆ ಪರಿಹಾರ ಮುಂತಾದ ವಿಷಯಗಳಲ್ಲಿ ಸ್ವಹಾಯ ಗುಂಪುಗಳನ್ನು ರಚಿಸಿಕೊಂಡು ಪರಸ್ಪರ ಸಹಕರಿಸಿಕೊಳ್ಳುವ ಅಭ್ಯಾಸವನ್ನು ರೈತ ಸಮುದಾಯ ಬೆಳೆಸಿಕೊಳ್ಳಲೇಬೇಕಾಗಿದೆ. ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಳ್ಳಬೇಕಾಗಿದೆ. ರೈತರು ಜಾಗೃತರಾದರೆ ಯಾವ ಕಣ್ಣುಮುಚ್ಚಾಲೆ ಆಟವೂ ಬಹಳ ದಿನ ನಡೆಯುವುದಿಲ್ಲ.

(ಕೃಪೆ : ಕೃಷಿ ಬಿಂಬ)

ಖಾದ್ಯ ಕೈಗನ್ನಡಿ

ಸಿಹಿಜೋಳದ ಸೂಪ್ (Sweet Corn Soup)

ಬೇಕಾಗುವ ಸಾಮಾಗ್ರಿ : ಕ್ಯಾರೆಟ್ 1, ಸಿಹಿಜೋಳ 1 ಕಪ್, ಉಪ್ಪು ರುಚಿಗೆ, ಅಜಿನೊಮೊಟೊ (ಚೈನಿಸ್ ಉಪ್ಪು) ಸ್ವಲ್ಪ, ಚಿಲ್ಲಿ ಸಾಸ್ ಸ್ವಲ್ಪ, ಬಿನ್ಸ್ 3-4 ಸಣ್ಣಗೆ ಹೆಚ್ಚಿದ್ದು, ಜೋಳದ ಹಿಟ್ಟು(Corn Flour) 2 ಟೀ.ಚ, ಕಾಳುಮೆಣಸಿನ ಪುಡಿ ಸ್ವಲ್ಪ, ಸೋಯಾಸೋಸ್ ಸ್ವಲ್ಪ.

ಮಾಡುವ ವಿಧಾನ : ಒಲೆಯ ಮೇಲೆ ನೀರನ್ನು ಕುದಿಯಲು ಬಿಡಿ. ಅದಕ್ಕೆ ಹೆಚ್ಚಿದ ಕ್ಯಾರೆಟ್, ಬೀನ್ಸ್ ಮತ್ತು ಸಿಹಿಜೋಳದ ಕಾಳನ್ನು ಹಾಕಿ ಸ್ವಲ್ಪ ಉಪ್ಪು ಬೆರೆಸಿ ಬೇಯಿಸಿ. ಈಗ ಜೋಳದ ಹಿಟ್ಟನ್ನು ಸ್ವಲ್ಪ ನೀರಿನಲ್ಲಿ ಕದಡಿ ಈ ಮಿಶ್ರಣಕ್ಕೆ ಹಾಕಿ ಗಂಟಾಗದಂತೆ ತಿರುವುತ್ತಾ ಇರಿ. ಈಗ ಒಲೆಯಿಂದ ಇಳಿಸಿ ಉಪ್ಪು, ಕಾಳುಮೆಣಸಿನ ಪುಡಿ, ಅಜಿನೊಮೋಟೋ ಸೇರಿಸಿ ಮಿಕ್ಸ್ ಮಾಡಿ. ಒಂದು Bowl ನಲ್ಲಿ ಸೂಪ್ ಹಾಕಿ ಪಕ್ಕದಲ್ಲಿ ಸೋಯಾಸೋಸ್ ಮತ್ತು ಚಿಲ್ಲಿ ಸೊಸ್ ಇಟ್ಟು ಬಿಡಿ. ಯಾರಿಗೆ ಎಷ್ಟು ಬೇಕೋ ತೆಗೆದುಕೊಳ್ಳುತ್ತಾರೆ.

– ಯಶೋದಾ ಹೆಗಡೆ, ನಾಡುಳ್ಳಿ

ವಿಪರ್ಯಾಸ

– ಶಶಿಕಲಾ ಹೆಗಡೆ

ತಲೆ ತುರಿಸಲೂ ಪುರುಸೊತ್ತಿಲ್ಲ
ಕೆಲವರಿಗೆ ಆಫೀಸಿನಲ್ಲಿ ಕೆಲಸದ ಭರಾಟೆ
ಇನ್ನು ಹಲವರು ಬರುತ್ತಾರೆ ಸ್ವಾಮಿ
ಆಫೀಸಿಗೆ ಹೊಡೆಯಲೆಂದೇ ಹರಟೆ

★★★

*PAGE DONATED BY : **SMT. MADHU AND SHRI S. M. HEGDE**, SANTACRUZ*

ಅನಂತತೆಯತ್ತ ಕೊಂಡೊಯ್ಯುವ ಸಂಶೋಧನಾತ್ಮಕ ಹೊತ್ತಿಗೆ ಇದು ಕಾಶಿ! ಇದು ವಾರಣಾಸಿ!

✍ ವಿಶ್ವನಾಥ ದೊಡ್ಮನೆ

ಕೃತಿ : ಇದು ಕಾಶಿ! ಇದು ವಾರಣಾಸಿ!
ಲೇಖಕರು : ಆಗುಂಬೆ ನಟರಾಜ್
ಪ್ರಕಾಶಕರು : ಎ. ಎಸ್. ಬಿ. ಟ್ರಸ್ಟ್ (ರಿ)
ಪುಟಗಳು : 516
ಬೆಲೆ : 350
ಮೊಬೈಲ್ : 9481423004

ಇದು ಕಾಶಿ! ಇದು ವಾರಣಾಸಿ!

516 ಪುಟಗಳ ಹೊತ್ತಿಗೆ. ಮುನ್ನುಡಿ, ಬೆನ್ನುಡಿಗಳ ವಿಶೇಷ ಆಡಂಬರ, ಲೇಖಕರ ವೈಭವೀಕರಣಗಳಿಲ್ಲದ ಅಪರೂಪದ ಗ್ರಂಥ. ಸಂಶೋಧನಾತ್ಮಕ ಕೃತಿಯಲ್ಲೆಲ್ಲೂ ಲೇಖಕರ ಭಾವಚಿತ್ರವಾಗಲಿ ಅವರ ಕುರಿತಾಗಿ ವರ್ಣನೆಗೆ ಅವಕಾಶ ನೀಡದೆ ಕಾಶಿಯ ವರ್ಣನೆಗೆ ಮೊದಲ ಹಾಗೂ ಹೆಚ್ಚಿನ ಮಹತ್ವ ನೀಡಿದ ಮೇರು ಗ್ರಂಥ ಇದು ಕಾಶಿ! ಇದು ವಾರಣಾಸಿ!

ಮುನ್ನುಡಿ, ಪೀಠಿಕೆ, ಬೆನ್ನುಡಿಗಳನ್ನು ಸ್ವತಃ ಲೇಖಕರೇ ಬರೆದು ಓದುಗರಲ್ಲಿ ಕುತೂಹಲವನ್ನು ಉಳಿಸಿರುವರು. ಅಷ್ಟೇ ಅಲ್ಲ ಸ್ವತಃ ಲೇಖಕರ ಬೆನ್ನುಡಿಯು ಕೃತಿಯನ್ನು ಓದಲು ಪ್ರೇರೇಪಿಸುತ್ತದೆ. ಪ್ರಪಂಚದಲ್ಲೇ ಅತಿ ಪ್ರಾಚೀನ ಹಾಗೂ ಪವಿತ್ರ ನಗರವೆಂದು ಹೆಸರಾದ ಕಾಶಿಯ ಕುರಿತು ಕನ್ನಡದಲ್ಲಿ ಪೂರ್ಣ ಮಾಹಿತಿ ತಿಳಿಸುವ ಗ್ರಂಥ ರಚನೆಯಾಗದೇ ಇರುವುದು ಶೋಚನೀಯ ಎನ್ನುತ್ತಾರೆ. ಈ ಕೃತಿ ಕೇವಲ ಪ್ರವಾಸಿ ಕಥನವಾಗದೆ ಸಂಶೋಧನಾತ್ಮಕ ಹೊತ್ತಿಗೆಯಾಗಿದೆ. ಖುದ್ದಾಗಿ ಕಾಶಿಗೆ ಹೋಗಿ ಕೆಲ ಸಂಗತಿಗಳನ್ನು ಕಂಡು ಅರಿತು ದಾಖಲಿಸಲು ಹಲವು ವರ್ಷಗಳೇ ಹಿಡಿದವು ಎನ್ನುತ್ತಾರೆ.

ಎರಡನೇ ಮುದ್ರಣದ ಅವಶ್ಯಕತೆ ಕುರಿತು ತಿಳಿಸಿರುವ ಲೇಖಕರು ಪೀಠಿಕೆಯಲ್ಲಿ ಈ ಕಾಶಿ ಎಂಬ ಪುಣ್ಯಕ್ಷೇತ್ರ ಭಾರತದ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕ ಪುರಾತನ ನಗರ ಕಾಶಿ ವಿವಿಧ ಸಂಸ್ಕೃತಿಗಳ ಮಿಶ್ರಣ, ನಾನಾ ರೀತಿಯ ಜಾತಿಯ-ಕುಲಗಳ, ಧರ್ಮಗಳ, ಸನ್ಯಾಸಿಗಳನ್ನು, ಸಂತರನ್ನು, ಜ್ಞಾನಿಗಳನ್ನು ವಿದ್ವಾಂಸರನ್ನು, ಪಂಡಿತರನ್ನು, ಪುರೋಹಿತರನ್ನು ವ್ಯಾಪಾರಸ್ಥರನ್ನು, ಕುಶಲ ಕರ್ಮಿಗಳನ್ನು ಮಹಾರಾಜರನ್ನು ವಿದ್ವಾಂಸರನ್ನು ಹಾಗೂ ದಾಳಿಕೋರರನ್ನು, ಆಕ್ರಮಣಕಾರರನ್ನು ಆಕರ್ಷಿಸಿದ ನಗರ ಕಾಶಿ!

ಕಾಶಿಯ ಪ್ರಾಚೀನತೆ, ಕಾಶಿಯ ರಾಜಕೀಯ ಚರಿತ್ರೆ, ಶಿವನಗರ ಕಾಶಿ, ಕಾಶಿಯ ಪ್ರಖ್ಯಾತ ಗುಡಿಗಳು, ಕಾಶಿಯ ಪ್ರಸಿದ್ಧ ಘಟ್ಟಗಳು, ಕಾಶಿಯ ಪ್ರಖ್ಯಾತ ಸಂತರು- ಜ್ಞಾನಿಗಳು, ಪುರುಷಾರ್ಥದಲ್ಲಿ ಕಾಶಿನಗರ, ಪ್ರವಾಸಿಗಳು ಕಂಡ ಕಾಶಿ, ಇಂದಿನ ಕಾಶಿ ಎಂಬ ಎಂಟು ಅಧ್ಯಾಯಗಳಲ್ಲಿ 516 ಪುಟಗಳೊಂದಿಗೆ ಕಾಶಿನಗರವನ್ನು ಆಗುಂಬೆ ನಟರಾಜ್ ವರ್ಣಿಸಿರುವರು.



ಅಧ್ಯಾಯ ಒಂದರಲ್ಲಿ ಕಾಶಿಯ ಪ್ರಾಚೀನತೆಯನ್ನು ಓದುತ್ತ ಹೋದಂತೆ ಮುಂದಿನದನ್ನು ಓದಲು ಆಸಕ್ತಿ ಹುಟ್ಟಿಸುತ್ತದೆ. ಯಾವುದೇ ವಿಷಯವನ್ನು ಅಂತೆಕಂತೆಗೆ ಸೀಮಿತಗೊಳಿಸದೇ ಪುರಾಣದ ಸಾಕ್ಷ್ಯ, ಇತಿಹಾಸದ ದಾಖಲೆಗಳನ್ನು ಸ್ಪಷ್ಟವಾಗಿ ವಿವರಿಸುವ ಲೇಖಕರು ಎಲ್ಲೂ ಅವಿಶ್ವಾಸಕ್ಕೆ ಅವಕಾಶ ನೀಡದಿರುವುದು ಕೃತಿಯ ಹಾಗೂ ಲೇಖಕರ ಹೆಚ್ಚುಗಾರಿಕೆ.

ಭಗವಂತನ ಮುಖದಿಂದ ಅವಿರ್ಭೂತವಾದ ವೇದಗಳನ್ನು ಗ್ರಹಿಸಿ ಧರಿಸುವ ಸಾಮರ್ಥ್ಯ ಎಲ್ಲರಿಗೂ ಇಲ್ಲದಿರುವುದರಿಂದ ಈ ಕೊರತೆಯನ್ನು ನೀಗಿಸಲು ಪುರಾಣಗಳು ಹುಟ್ಟಿಕೊಂಡವು. ಜನ ಸಾಮಾನ್ಯರ ಉಪಯೋಗಕ್ಕಾಗಿ ವ್ಯಾಸಾದಿ ಮಹರ್ಷಿಗಳು ಸುಲಭವೂ, ಸರಳವೂ ಆದ ಶೈಲಿಯಲ್ಲಿ ಪುರಾಣಗಳನ್ನು ಜನರಿಗೆ ತಿಳಿಯಪಡಿಸುವುದೇ ಪುರಾಣದ ಉದ್ದೇಶವೆಂಬುದನ್ನು ತಿಳಿಸುತ್ತ ಓದುಗರನ್ನು ಪುರಾಣ ಅಥವಾ ವೇದಕಾಲಕ್ಕೆ ಕೊಂಡೊಯ್ದು ಲೇಖಕರು ವನಸಂಪತ್ತುಗಳ ಮೇಲೆ ಆದರ, ಗುಡಿಗೋಪುರಗಳ ಆರಾಧನೆ, ನಂಬಿಕೆ, ಶಿವ ಮತ್ತು ಲಿಂಗಪೂಜೆ, ಪ್ರಾಣಿ, ವೃಕ್ಷ ಪೂಜೆ, ಅಹಿಂಸೆಗಳನ್ನು ತಿಳಿಸಿ ಸಮಾಜದಲ್ಲಿ ಸಾತ್ವಿಕ ಗುಣ ಹರಡಲು ಪುರಾಣ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ ಎಂಬುದನ್ನು ತುಂಬ ಸರಳವಾಗಿ ವಿವರಿಸಿರುವರು.

ಮಹಾಭಾರತ, ಜೈನಧರ್ಮ ಗ್ರಂಥ, ಪ್ರಾಚೀನ ಗ್ರಂಥ ಪುರಾಣಗಳಲ್ಲಿ ಕಾಶಿಯ ನಿರ್ಮಾತನಾದ "ದೇವದಾಸ"ನ ಕುರಿತಾಗಿ ಇರುವ ಇತಿಹಾಸವನ್ನು ಅರುಹಿರುವರು.

ಇತಿಹಾಸವೇ ನಿಜವಾದ ತತ್ವಜ್ಞಾನವೆಂದು ನೆಪೋಲಿಯನ್ ಬೋನಾಪಾರ್ಟ್‌ನ ಹೇಳಿಕೆಯನ್ನು ಲೇಖಕರು ನೆನಪಿಸುತ್ತಾರೆ. ಕ್ರಿ. ಶ. 916ರಲ್ಲಿ ಕರ್ನಾಟಕದ ರಾಷ್ಟ್ರ ಕೂಟ ರಾಜ ಇಂದ್ರಾಯುದ ಕಾಶಿಯನ್ನು ಆಕ್ರಮಿಸಿದ ಗಹಡವಾಲರೇ ಕಾಶಿಯ ಮುಂದಿನ ರಾಜರಾಗಿ ಮೆರೆದರು. ಇವರ ಕಾಲದಲ್ಲೇ ಕಾಶಿಯ ಪ್ರಸಿದ್ಧ ಗುಡಿಗಳ ನಿರ್ಮಾಣ ಕಾರ್ಯ ನೆರವೇರಿ ಇವರ ಕೀರ್ತಿ ಉತ್ತುಂಗ ಶಿಖರಕ್ಕೇರಿತು ಎನ್ನುವುದನ್ನು ದಾಖಲಿಸಿರುವರು.

ಗಹಡವಾಲರು ಯಾರು? ಆ ಹೆಸರಿನ ಅರ್ಥವನ್ನು ಲೇಖಕರು ಒಂದು ಪುಟದಲ್ಲಿ ವಿವರಿಸಿರುವರು. ಹೀಗೆ ಕಾಶಿ ರಾಜಕೀಯ ಚರಿತ್ರೆ ಓದುತ್ತಿರುವಂತೆ ಮನಕಲಕುವಷ್ಟು ವಿಷಯಗಳನ್ನು ಇತಿಹಾಸದಿಂದ ಹುಡುಕಿ ಆಸಕ್ತರಿಗೆ ಒದಗಿಸುವಲ್ಲಿ ಬಹು ಶ್ರಮವಹಿಸಿರುವುದನ್ನು ಕಾಣುತ್ತೇವೆ.

ಪೃಥ್ವಿರಾಜನ ಸೋಲಿನಿಂದ ಕಾಶಿ ಮೊದಲ ಬಾರಿಗೆ ತುರುಕರ ಆಡಳಿತಕ್ಕೊಳಪಡುತ್ತದೆ. ಗಹಡವಾಲ ರಾಜ ಜಯಚಂದ್ರನನ್ನು ಚಂದಾವಾರ್ ಮತ್ತು ಇಟಾವೆಗಳ ಮಧ್ಯ ಕದನದಲ್ಲಿ ಅವನನ್ನು ಸೋಲಿಸಿ ಹತ್ಯೆಗೈದು ಅಸ್ನಿ ನಗರದ ಕೋಟೆಯಲ್ಲಿನ ರಾಜ ಜಯಚಂದ್ರನ ಅಪಾರ ಐಶ್ವರ್ಯವನ್ನು ಕೊಳ್ಳೆಹೊಡೆಯುತ್ತಾನೆ. ತುರುಕರ ರಾಜ ಘೋರಿ ಮಹಮ್ಮದ್ ಮುಂದೆ ಕಾಶಿ ನಗರಕ್ಕೆ ನುಗ್ಗಿ ಸಾವಿರ ಗುಡಿಗಳನ್ನು ನಾಶಪಡಿಸಿದ. ನಗನಾಣ್ಯ ಆಭರಣಗಳನ್ನು ಲೂಟಿ ಮಾಡಿ ಘಸ್ನಿಗೆ ವಾಪಾಸಾಗುವ ವಿಷಯವನ್ನು ಲೇಖಕರು 'ಕಾಶಿ ರಾಜಕೀಯ ಚರಿತ್ರೆ' ಎನ್ನುವ ಎರಡನೇ ಅಧ್ಯಾಯದಲ್ಲಿ ಅರುಹಿರುವರು.

ಅದೇ ಅಧ್ಯಾಯದಲ್ಲಿ ಪ್ರಥಮ ಬಾರಿಗೆ ಇಂಗ್ಲಿಷರು ಕಾಶಿಯನ್ನು ಆಶ್ರಯಿಸಿದ ಕಥೆಯು ವಿಸ್ತಾರವಾಗಿದೆ. ವಾರನ್ ಹೇಸ್ಟಿಂಗ್ಸ್‌ನು ಕಾಶಿರಾಜ ಚೈತ್‌ಸಿಂಗ್‌ನನ್ನು ಸೋಲಿಸಿ ಕಾಶಿಯನ್ನು ತನ್ನ ಒಡೆತನಕ್ಕೆ ಪಡೆದ ಮೇಲೆ ಹೀಗೆ ಕಾಶಿ ಅರಕ್ಷಿತ ನಗರವಾಯಿತು ಎನ್ನುವುದನ್ನು ವಿವರಿಸಿರುವರು.

ಆದರೆ ಕಾಶಿ ಇನ್ನು ಬದುಕುಳಿದಿದೆ. ಪ್ರಾಚೀನತೆಯ ಕುರುಹಾದ ಗುಡಿ-ಗೋಪುರಗಳು ನಾಶವಾದರೂ ಅದರ ಸುಂದರ ವನದ ಸಂಪತ್ತು ತೋಟಗಳು ನಶಿಸಿದರು, ಮಠಗಳು ಸಾಂಸ್ಕೃತಿಕ ಮಂದಿರಗಳು ಹೇಳ ಹೆಸರಿಲ್ಲದಂತೆ ನಾಶವಾದರು ಕಾಶಿ ತನ್ನ ಪ್ರಾಚೀನ ಸುಂದರತೆಯ ಮಾಧುರ್ಯ, ಗಂಭೀರ, ಘನತೆ ಕಳೆದುಕೊಂಡರು, ಅದು ಇನ್ನು ವಿಶ್ವದೊಂದಿಗೆ ಪವಿತ್ರ ಸಂಬಂಧ ಇಟ್ಟುಕೊಂಡಿದೆ ಎಂದರೆ ಅದರ ಪಾವಿತ್ರ್ಯ ಎಷ್ಟಿರಬಹುದು ಎಂದು ಪ್ರಶ್ನಿಸುತ್ತಾರೆ.

ಅಧ್ಯಾಯ ಎರಡರಲ್ಲಿ ಪ್ರಸಿದ್ದ ಫ್ರೆಂಚ್ ಸಾಹಿತಿ ಸೈ ಮೇನ್ ವೀಲ್ ಉದ್ಗರಿಸುವುದನ್ನು ದಾಖಲಿಸಿದ್ದಾರೆ. ಒಂದು ದೇಶವನ್ನು ಅರಿಯಬೇಕಾದರೆ ನಾವು ಅದರ ನಾಶಗೊಂಡ ಸ್ಪಷ್ಟಾರ್ಥವಿಲ್ಲದ ಅನಾಮಧೇಯ ಭಾಗವನ್ನು ಪ್ರೀತಿಸಬೇಕು. ಅದೇ ರೀತಿ ಸಿದ್ಧಾಂತಿ ವಾಲ್ಪೇ ಭಾರತದ ಕುರಿತು ಯುರೋಪಿಯನ್ ಇತಿಹಾಸಕಾರರು ಯಾವುದೇ ಇತಿಹಾಸ- ಸಂಗತಿ, ಕಥೆ ರಚಿಸದೆ ಇರುವುದಕ್ಕೆ ಆಶ್ಚರ್ಯ ವ್ಯಕ್ತಪಡಿಸಿರುವುದನ್ನು ಉಲ್ಲೇಖಿಸಿರುವರು.

ಅಧ್ಯಾಯ ಮೂರರಲ್ಲಿ ಶಿವನಗರ ಕಾಶಿ ಶೀರ್ಷಿಕೆಯಲ್ಲಿ ಈ ಕಾಶಿ ಕ್ಷೇತ್ರವನ್ನು ಶಿವ ಯಾಕೆ ಆರಿಸಿದ್ದ, ಶಿವನ ವೃತ್ತಾಂತ ದೈವತ್ವ, ಅವನ ಮಹತ್ವ ವೈಶಿಷ್ಟ್ಯ, ಶಕ್ತಿಯ ಕುರಿತು 25 ಪುಟಗಳಲ್ಲಿ ವಿವರಿಸಿರುವರು. ಅಧ್ಯಾಯ 4ರಲ್ಲಿ ಪ್ರಖ್ಯಾತ ಗುಡಿಗಳ ಕುರಿತು 64 ಪುಟಗಳಲ್ಲಿ ವಿವರಿಸಲಾಗಿದೆ. ಅಧ್ಯಾಯ 5ರಲ್ಲಿ ಕಾಶಿಯಲ್ಲಿರುವ ಪ್ರಖ್ಯಾತ ಘಟ್ಟಗಳ ಮಾಹಿತಿಯನ್ನು 88 ಪುಟಗಳಲ್ಲಿ ತಿಳಿಸಲಾಗಿದೆ. ಅಧ್ಯಾಯ 6ರಲ್ಲಿ ಕಾಶಿಯ ಪ್ರಖ್ಯಾತ ಸಂತರು - ಜ್ಞಾನಿಗಳ ಕುರಿತಾಗಿ 134 ಪುಟಗಳಲ್ಲಿಯೂ ಅಧ್ಯಾಯ 7ರಲ್ಲಿ ಪುರುಷಾರ್ಥದಲ್ಲಿ ಕಾಶಿ ನಗರಿ 10 ಪುಟಗಳಲ್ಲಿ ವಿವರಿಸಲಾಗಿದೆ.

ಅಧ್ಯಾಯ 8ರಲ್ಲಿ ಪ್ರವಾಸಿಗರು ಕಂಡ ಕಾಶಿ 34 ಪುಟಗಳಲ್ಲಿ ವರ್ಣಿಸಲಾಗಿದೆ. ಅಧ್ಯಾಯ 9ರಲ್ಲಿ ಇಂದಿನ ಕಾಶಿ ಸ್ಥಿತಿಗತಿ ಕುರಿತಾಗಿ 56 ಪುಟಗಳಲ್ಲಿ ವಿವರಿಸಲಾಗಿದೆ.

ಬೆಂಗಳೂರು ನಿವಾಸಿ ಆಗುಂಬೆ ನಟರಾಜ್ ವೃತ್ತಿಯಿಂದ ಬ್ಯಾಂಕ್ ಉದ್ಯೋಗಿಯಾಗಿದ್ದವರು. ಇಪ್ಪತ್ತು ವರ್ಷಗಳ ಹಿಂದೆ ಕೆನರಾ ಬ್ಯಾಂಕಿನ ಉದ್ಯೋಗದಿಂದ ನಿವೃತ್ತಿಯಾದ ಮೇಲೆ 'ದೇಶಸುತ್ತು ಕೋಶ ಓದು..' ಎನ್ನುವ ನಾಣ್ನುಡಿಯ ಹಿಂದೆ ಬಿದ್ದರು.

ಇದು ಬರ್ಲಿನ್! ಇದು ಜರ್ಮನಿಯ ಐತಿಹಾಸಿಕ ಕೃತಿ ಅಮಸ್ಟರ್‌ಡ್ಯಾಮ್‌ನಿಂದ ಅವಿಗ್ನಾನ್‌ಗೆ ಅಥೆನ್ಸ್‌ನಿಂದ ಇಸ್ತಾನ್‌ಬುಲ್‌ಗೆ, ನ್ಯೂಯಾರ್ಕ್‌ನಿಂದ ನ್ಯೂಕಾಟ್‌ಗೆ ಪವಿತ್ರ ಕ್ಷೇತ್ರ ಪ್ರವಾಸ, ಜರುಸಲೇಂ, ಗೋವಾದ ಗುಡಿಗಳು ಒಂದು ನೋಟ, ಸಿಖ್ಖರ ಇತಿಹಾಸ, ರಾಣಿ ವಿಕ್ಟೋರಿಯಾ ಸೇರಿದಂತೆ 26 ಅಮೂಲ್ಯ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿರುವರು. 2005ರಲ್ಲಿ ಪ್ರಥಮ ಮುದ್ರಣ ಕಂಡ ಇದು ಕಾಶಿ! ಇದು ವಾರಣಾಸಿ! 2017ರಲ್ಲಿ ಎರಡನೇ ಮುದ್ರಣ ಹೊಂದಿ ಆಸ್ತಿಕರೊಂದಿಗೆ ನಾಸ್ತಿಕರು ಓದಲೇಬೇಕಾದ ಕೃತಿ ಇದು. ಕಾಶಿ! ಇದು ವಾರಣಾಸಿ! ಯಾಕೆಂದರೆ ಪ್ರಾಚೀನ ನಗರ ಕಾಶಿಯ ಚರಿತ್ರೆ ಎಂದರೆ ಭಾರತದ ಚರಿತ್ರೆಯೂ ಹೌದು.

ಬಿಲ್ವದಲ್ಲಿ ಅಡಗಿರುವ ಔಷಧೀಯ ಗುಣ

ಬಿಲ್ವ ವೃಕ್ಷದ ಬೇರಿನ ಮತ್ತು ಮರದ ನಡುವಿನ ತಿರುಳಿನ ಭಸ್ಮದಲ್ಲಿ ಸೋಡಿಯಂ, ಪೊಟ್ಯಾಶಿಯಂ, ಕ್ಯಾಲ್ಸಿಯಂ, ಲೋಹರಂಜಕ, ಸಿಲಿಕಾ ಅಂಶಗಳು ಹೇರಳವಾಗಿದ್ದು ಇದು ಆರೋಗ್ಯದ ಮೇಲೆ ಉತ್ತಮ ಪರಿಣಾಮ ಬೀರುತ್ತದೆ.

ಮಧುಮೇಹ ನಿಯಂತ್ರಣ : ಬಿಲ್ವಪತ್ರೆಯ ಸೇವನೆ ಮತ್ತು ಹಣ್ಣಿನ ಪಾನಕ ಸಕ್ಕರೆ ಹಾಕದೆ ಕುಡಿಯಬೇಕು.

ಅತಿಸಾರ, ಜ್ವರ, ಮೂತ್ರ ಸಂಬಂಧಿತ ರೋಗಗಳಿಗೆ ಬಿಲ್ವ ಪತ್ರ ದಿವ್ಯ ಔಷಧಿ. ಬಿಲ್ವ ಪತ್ರದ ಎಲೆಯ ಕಷಾಯವನ್ನು ಸೇವನೆ ಮಾಡುತ್ತಾ ಬರಬೇಕು.

ಜೀರ್ಣಕ್ರಿಯೆ ಹೆಚ್ಚಿಸುತ್ತದೆ : ಅಜೀರ್ಣ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಬಿಲ್ವಪತ್ರೆ ಉತ್ತಮ ಔಷಧಿ ಆಗಿದೆ.

ಗ್ಯಾಸ್ಟ್ರಿಕ್ ತೊಂದರೆ ನಿವಾರಣೆ : ಸುಮಾರು ನೂರು ಗ್ರಾಂ ಬಿಲ್ವದ ಲೇಹ ಸೇವಿಸುತ್ತಿದ್ದರೆ ಗ್ಯಾಸ್ಟ್ರಿಕ್ ತೊಂದರೆ ನಿವಾರಣೆಯಾಗುತ್ತದೆ.

10 ಗ್ರಾಂ ನಷ್ಟು ಬಿಲ್ವದ ಚೂರ್ಣ ಸೇವಿಸಿದರೆ ಭೇದಿ ಮತ್ತು ಹೊಟ್ಟೆನೋವು ಶಮನವಾಗುತ್ತದೆ.

ಕಣ್ಣಿನ ದೃಷ್ಟಿ ವೃದ್ಧಿಗೆ : ಬಿಲ್ವದ ಎಲೆಗಳನ್ನು ನೀರು ಮಿಶ್ರಿತದಿಂದ ಅರೆದು ಕಣ್ಣಿನ ರೆಪ್ಪೆಯ ಮೇಲೆ ಲೇಪಿಸಿದರೆ ದೃಷ್ಟಿ ವೃದ್ಧಿಸುತ್ತದೆ.

ಆರೋಗ್ಯ ವೃದ್ಧಿಗೆ : ಬಿಲ್ವಪತ್ರೆಯ ತಂಬುಳಿ ಸೇವಿಸಿದರೆ ಆರೋಗ್ಯ ವೃದ್ಧಿಸುತ್ತದೆ.

– ಲಲಿತಾ ಮಾರ್ಕಂಡೆ

ಸಂಕ್ಷಿಪ್ತ ಸುದ್ದಿಗಳು

ಪುಣೆಯ ಮರಾಠಿ-ಕನ್ನಡ ಸ್ನೇಹವರ್ಧನ ಕೇಂದ್ರದ ಬೆಳ್ಳಿಹಬ್ಬದ ಸಡಗರ

ಪುಣೆಯ ಮರಾಠಿ-ಕನ್ನಡ ಸ್ನೇಹವರ್ಧನ ಕೇಂದ್ರದ ಬೆಳ್ಳಿಹಬ್ಬದ ಪ್ರಯುಕ್ತ ನಡೆದ ಸಮಾರಂಭದಲ್ಲಿ ನ್ಯಾಯವಾದಿ ಎಮ್. ಎಸ್. ಪಂಡಿತರವರ ಸಾಧನೆಯನ್ನು ಗುರುತಿಸಿ ಸನ್ಮಾನಿಸಲಾಯಿತು. ಪುಣೆಯ ಮರಾಠಿ-ಕನ್ನಡ ಸ್ನೇಹವರ್ಧನ ಕೇಂದ್ರವು ಕನ್ನಡೇತರರಿಗಾಗಿ ವಿಶೇಷವಾಗಿ ಮರಾಠಿಗರ ಸಲುವಾಗಿ 1992-93ರಲ್ಲಿ ಆರಂಭಿಸಿದ ಕನ್ನಡ ಕಲಿಕಾ ವರ್ಗವು ಈ ವರ್ಷದ ಬೆಳ್ಳಿಹಬ್ಬದ ಸಡಗರದಲ್ಲಿದ್ದು ಇದೊಂದು ಕನ್ನಡಿಗರು ಮರಾಠಿಗರ ಅನುಬಂಧದ ಐತಿಹಾಸಿಕ ದಾಖಲೆಯಾಗಿದೆ ಎಂದು ಕನ್ನಡ ಕಲಿಕಾ ವರ್ಗದ ಸಂಚಾಲಕರು, ಕನ್ನಡ ಕಲಿಕಾ ವರ್ಗದ ಶಿಕ್ಷಕರೂ ಆದ ಕೃ. ಶಿ. ಹೆಗಡೆ ತಿಳಿಸಿದ್ದಾರೆ.

ಕೇಂದ್ರವು ಮಾರ್ಚ್ 2018ರಲ್ಲಿ ಆಯೋಜಿಸಿದ ಕನ್ನಡ ಕಲಿಕಾ ವರ್ಗದ ಫಲಿತಾಂಶವನ್ನು ಪ್ರಕಟಿಸಲಾಗಿದೆ. ಶ್ರೀಮತಿ ವೃಂದಾ ಮಾಧವ ಘಾಟೆ ಶೇಕಡಾ 96 ರಷ್ಟು ಅಂಕ ಗಳಿಸಿ ಪ್ರಥಮ ಸ್ಥಾನ ಗಿಟ್ಟಿಸಿದ್ದಾರೆ. ಶ್ರೀಮತಿ ಶುಭದಾ ಅರವಿಂದ ಮುಳಗುಂದ, ಶ್ರೀ ಅಚ್ಯುತ ಗೋಪಾಲ ಕುಲಕರ್ಣಿ ಮತ್ತು ಪ್ರಾಧ್ಯಾಪಕ ವಿಜಯ ದಿನಕರ ಸಾಠೆ ಈ ಮೂವರು ಶೇಕಡ 93 ರಷ್ಟು ಗುಣ ಗಳಿಸಿ ವರ್ಗದಲ್ಲಿ ಎರಡನೇ ಕ್ರಮಾಂಕ ಪಡೆದಿದ್ದಾರೆ. ಶ್ರೀಮತಿ ಅನಘಾ ಆನಂದ ಕುಲಕರ್ಣಿ 92.5% ಅಂಕ ಗಳಿಸಿ ವರ್ಗಕ್ಕೆ ಮೂರನೇ ಸ್ಥಾನ ಹೊಂದಿದ್ದಾರೆ. ಸಂಪೂರ್ಣ ವರ್ಗದ ಫಲಿತಾಂಶ 100% ಆಗಿದೆ.

ಪ್ರವೇಶ ಪ್ರಕ್ರಿಯೆ : ಕನ್ನಡ ಬರೆಯಲು, ಓದಲು, ಮಾತನಾಡಲು ಬಾರದ ಕನ್ನಡ, ತುಳು, ಕೊಂಕಣಿ ಭಾಷಿಕರು ಅಥವಾ ಇತರ ಮಾಧ್ಯಮಗಳಲ್ಲಿ ಶಿಕ್ಷಣ ಪಡೆದವರು ಪ್ರಾಮಾಣಿಕ ಕನ್ನಡ ಓದಲು, ಬರೆಯಲು, ಮಾತನಾಡಲು ಬಯಸುವವರು ದೂರಧ್ವನಿ ಕ್ರಮಾಂಕ 9890391552 / 9922780677 ಈ ದೂರಧ್ವನಿಯನ್ನು ಸಂಪರ್ಕಿಸ ಬೇಕೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

Honarary Doctorate

Smt. Rajani Pai, a poet, writer and social worker is awarded Honarary Doctorate in Social Service, People Concern, By Indian Virtual University For Peace And Education, Bangalore at Karnataka University Dharwad on 9th June 2018. Her dedication to social work was also applauded when she was honoured with a "2018 Karnataka Vikas Ratna" Award in Social Service, By "Bangalore Ratna Magazine" on their 14th Annual Award Celebration in Bangalore on 9th July 2018.

Born at Siddapur, Uttara Kannada, District she has been creative since her childhood. Not only she participated in dramas but also directed 3 mythological dramas for kids. She also bagged several prizes in debating and elocution competitions including state level competitions. She came to Mumbai after marriage and dedicated herself to social work. As a BJP party member she has been taking part in various social programs like distributing free books, stationeries, clothes to needy and deserving students; building toilets for slum dwellers; assisting for healthcare for the needy; assisting women to be self sufficient. As the president of Women Wing of Kannada Sangh, Mumbai she has successfully conducted many programs. She is also active in Srajana Lekhakiyara Balaga and Kannada Sahitya Balaga and participated in many kavigoshti and published many articles.

We congratulate her.

Achievement

Sudeep A. Joshi Son of Smt. Veena & Shri Arunkumar Joshi Sirsi. Passed SSC with 95.3%. He is also learning Tabala.

We congratulate him and wish him a bright future.

"THREAD CHANGING CEREMONY"
(Yajur Upakarma)

"THREAD CHANGING CEREMONY" (Yajur Upakarma) has been organised for the benefit of Havyaka community members at "Dombivli Medical Centre" on 26th August 2018 Sunday between 7.00 AM to 9.00 AM. All Dombivli and surrounding area.

Havyaka residents are requested to note and take advantage of the opportunity. For details and registration (so that necessary arrangements can be provided) please contact :

DOMBIVLI MEDICAL CENTRE : 0251 2487291
(SUMITRA & JAYA BHAT)

G. V. HEGDE	**:**	**9167434626**
ARVIND K. BHAT	**:**	**8779155788**
UMESH S. HEGDE	**:**	**8080868649**
RAMESH VAIDYA	**:**	**8879303710**

Page Donated by : ***Shri Suhas Gunishastri,*** *Prabhadevi In the memory of his parents* ***Late Smt. Rajeshwari & Late Shri P. V. Gunishastri ,*** *Past President, H.W.T.*

ಮುಂಬಯಿ ಕನ್ನಡ ಸಂಘ : ಶೈಕ್ಷಣಿಕ ಸಾಲಿನ ಕನ್ನಡ ಸರ್ಟಿಫಿಕೇಟ್ ತರಗತಿಗೆ ಚಾಲನೆ
ಭಾಷಾ ಪರಿಣತಿಯಿಂದ ಜಾಗತಿಕ ಜ್ಞಾನ ಪ್ರಾಪ್ತಿ : ಅಮಿತಾ ಭಾಗ್ವತ್

ಅತಿ ಹೆಚ್ಚು ಜ್ಞಾನಪೀಠ ಪುರಸ್ಕಾರಕ್ಕೆ ಪಾತ್ರವಾದ ಕನ್ನಡಿಗರ ಭಾಷೆ ಭೌಗೋಳಿಕವಾಗಿಯೇ ಪಸರಿಸಿದೆ. ಭಾಷಾ ಪರಿಣತಿಯಿಂದ ಜಾಗತಿಕ ಜ್ಞಾನ ಹೆಚ್ಚುತ್ತದೆ ಮತ್ತು ಆಯಾ ಭಾಷೆಗಳಲ್ಲಿನ ಸಾಹಿತ್ಯ ಸಂಸ್ಕೃತಿಯ ಅರಿವಾಗುತ್ತದೆ. ಆದುದರಿಂದ ಅವಕಾಶ ಒದಗಿದಾಗ ಅಧಿಕ ಭಾಷೆಗಳನ್ನು ಒಲಿಸಿಕೊಳ್ಳಬೇಕು. ಅದು ನಮ್ಮ ಭಾಗ್ಯವಾಗಿ ಪರಿಣಮಿಸ ಬಲ್ಲದು ಎಂದು ಹವ್ಯಕ ವೆಲ್ಫೇರ್ ಟ್ರಸ್ಟ್‌ನ ಮುಖವಾಣಿ 'ಹವ್ಯಕ ಸಂದೇಶ' ಮಾಸಿಕದ ಸಂಪಾದಕಿ, ಕರ್ನಾಟಕ ಸಂಘ ಮುಂಬಯಿ ಇದರ ಕಾನೂನು ಸಲಹಾಗಾರ್ತಿ ನ್ಯಾಯವಾದಿ ಅಮಿತಾ ಎಸ್. ಭಾಗ್ವತ್ ಅಭಿಪ್ರಾಯಪಟ್ಟರು.

ಜು. 15ರಂದು ಮಾಟುಂಗ ಪೂರ್ವದ ಮೈಸೂರು ಅಸೋಸಿಯೇಶನ್ ತಳಮಹಡಿಯ ಸಭಾಗೃಹದಲ್ಲಿ ನಡೆದ ಮುಂಬಯಿ ಕನ್ನಡ ಸಂಘ ಶೈಕ್ಷಣಿಕ ಸಾಲಿನ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನ ಉದ್ಘಾಟನೆ ಮತ್ತು ಪ್ರಮಾಣಪತ್ರ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮುಂಬಯಿ ನೆಲದಲ್ಲಿ ನಮ್ಮ ಮಾತೃಭಾಷೆಯಾದ ಕನ್ನಡವನ್ನು ಬೆಳೆಸುತ್ತಾ ಕನ್ನಡದ ಎಲ್ಲಾ ಮನಸ್ಸುಗಳನ್ನು ಒಟ್ಟುಗೂಡಿಸುತ್ತಾ ಕನ್ನಡದ ಸಾಹಿತ್ಯ, ಅಭಿರುಚಿಯನ್ನು ಹುಟ್ಟು ಹಾಕುತ್ತಾ ಅದಕ್ಕೆ ನೀರೆರೆದು ಪೋಷಿಸುತ್ತಾ ಕನ್ನಡದ ಕಂಪನ್ನು ಎಲ್ಲೆಡೆ ಪಸರಿಸುವ ಈ ಸಂಘದ ಭಾಷಾಭಿಮಾನ ಸ್ತುತ್ಯರ್ಹ. ಭಾರತೀಯ ಎಲ್ಲಾ ಭಾಷೆಗಳೂ ಬೇರೆಯಾಗಿದ್ದರೂ ಸಂಸ್ಕೃತಿ ಮಾತ್ರ ಒಂದಾಗಿದೆ. ಎಲ್ಲಾ ಭಾಷೆಗಳೂ ಮೌಲ್ಯಯುತವಾಗಿವೆ ಎಂದು ನುಡಿದು ವಿವಿಧತೆಯಲ್ಲಿ ಕನ್ನಡದ ಹಿರಿಮೆಯನ್ನು ಕಾವ್ಯಾತ್ಮಕವಾಗಿ ಬಣ್ಣಿಸಿ ನೆರೆದ ಕನ್ನಡಾಭಿಮಾನಿಗಳಿಗೆ ಶುಭ ಹಾರೈಸಿದರು.

ಮುಖ್ಯ ಅತಿಥಿ ಅಮಿತಾ ಭಾಗ್ವತ್ ಅವರು 2017-2018ನೇ ಶೈಕ್ಷಣಿಕ ಸಾಲಿನ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಿ ಶುಭ ಹಾರೈಸಿದರು. ಉಪಾಧ್ಯಕ್ಷ ಡಾ. ಎಸ್. ಕೆ. ಭವಾನಿ ಪ್ರಸ್ತಾವನೆಗೈದು ಕನ್ನಡದ ಕೃಷಿಗೆ ಇದೊಂದು ಪೂರಕ ಕಾಯಕವಾಗಿದೆ. ಸಂಘವು ಸದಾ ಕ್ರಿಯಾಶೀಲವಾಗಿ ಈ ತರಗತಿಗಳನ್ನು ನಡೆಸುತ್ತಾ ಕನ್ನಡೇತರರಲ್ಲೂ ಭಾಷೆಯನ್ನು ಪಸರಿಸುತ್ತಿದೆ. ಇಲ್ಲಿನ ಶಿಕ್ಷಕರಿಗೆ ಶಿಷ್ಯ ಇಚ್ಛೆಯೇ ಪ್ರೇರಣೆಯಾಗಿದೆ. ಸುಮಾರು 25 ವರ್ಷಗಳಿಂದ ಹೊರನಾಡಿನಲ್ಲಿ ಭಾಷಾಭಿಮಾನ ಬೆಳೆಸಿ ಉಳಿಸಿ ಕಲಿಸಿ ಮುನ್ನಡೆಯುತ್ತಿರುವುದು ಸ್ವಾಭಿಮಾನವೇ ಸರಿ. ಯಾವ ಭಾಷೆಯನ್ನೂ ಯಾಕೆ ಕಲಿಯಬೇಕು ಎನ್ನುವುದಕ್ಕಿಂತ ಎಲ್ಲಾ ಭಾಷೆಗಳನ್ನು ಕಲಿತು ಬಹುಭಾಷಾ ಮೇಧಾವಿಗಳಾಗಬೇಕು ಎನ್ನುವ ಮನೋಭಾವ ದೊಡ್ಡದು. ಬಹುಭಾಷೆಗಳಿಂದ ಸಹೋದರತೆ ಬೆಳೆಯುತ್ತದೆ. ಆದ್ದರಿಂದಲೇ ಭಾಷಾ ಮಾಧ್ಯಮ ಸೌಹಾರ್ದತೆಗೆ ಪೂರಕವಾಗಿದೆ ಎಂದರು.

ಸಂಘದ ಕನ್ನಡ ತರಬೇತಿ ಶಿಕ್ಷಕಿ ಅರ್ಚನಾ ಪೂಜಾರಿ ಮಾತನಾಡಿ, ಮರಾಠಿ ನೆಲದಲ್ಲಿ ಕನ್ನಡೇತರರಿಗೆ ಕನ್ನಡ ಕಲಿಸುವುದು ನನ್ನ ಸೌಭಾಗ್ಯವೇ ಸರಿ. ಅವರಲ್ಲಿನ ಭಾಷಾಭಿಮಾನ ನನ್ನನ್ನು ಪ್ರೋತ್ಸಾಹಿಸಿದೆ ಎನ್ನುತ್ತಾ ಕನ್ನಡ ಅಧ್ಯಯನ ಮಾಡಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಇಂಡಿಯನ್ ವರ್ಚುವಲ್ ಯುನಿವರ್ಸಿಟಿ ಫಾರ್ ಫೀಸ್ ಆ್ಯಂಡ್ ಎಜುಕೇಶನ್ ಬೆಂಗಳೂರು ಕರ್ನಾಟಕ ಶಿಕ್ಷಣ ಸಂಸ್ಥೆಯಿಂದ ಗೌರವ ಡಾಕ್ಟರೇಟ್‌ಗೆ ಪಾತ್ರರಾದ ಮತ್ತು ಇತ್ತೀಚೆಗೆ ಬೆಂಗಳೂರು ರತ್ನ ಮಾಸಿಕದಿಂದ ಬೆಂಗಳೂರು ರತ್ನ - 2018 ಪ್ರಶಸ್ತಿಗೆ ಭಾಜನರಾದ ಕನ್ನಡ ಸಂಘದ ಮಹಿಳಾ ವಿಭಾಗಾಧ್ಯಕ್ಷೆ ಡಾ. ರಜನಿ ವಿ. ಪೈ ಅವರಿಗೆ ಸಂಘದ ಪರವಾಗಿ ಅಭಿನಂದಿಸಿ ಗೌರವಿಸಲಾಯಿತು. ಸಂಘದ ವಾಚನಾಲಯ ಮುಖ್ಯಸ್ಥ ಎಸ್. ಕೆ. ಪದ್ಮನಾಭ ಸೇರಿದಂತೆ ಕನ್ನಡಾಭಿಮಾನಿಗಳು ಉಪಸ್ಥಿತರಿದ್ದರು. ಹಳೆ ವಿದ್ಯಾರ್ಥಿಗಳೂ ತಮ್ಮ ಕನ್ನಡ ಭಾಷಾ ಕಲಿಕೆಯ ಅನುಭವ ಹಂಚಿಕೊಂಡರು. ಬಳಿಕ ನೂತನ ವಿದ್ಯಾರ್ಥಿಗಳ ಪರಿಚಯ ಮಾಡಿ, ಕನ್ನಡ ಸರ್ಟಿಫಿಕೇಟ್ ಕೋರ್ಸ್‌ಗೆ ಸ್ವಾಗತಿಸಲಾಯಿತು.

ರಜನಿ ವಿ. ಪೈ ಪ್ರಾರ್ಥನೆಗೈದರು. ಅಧ್ಯಕ್ಷ ಗುರುರಾಜ್ ಎಸ್. ನಾಯಕ್ ಸ್ವಾಗತಿಸಿ ಅತಿಥಿಗಳನ್ನು ಪರಿಚಯಿಸಿದರು. ಗೌರವ ಪ್ರಧಾನ ಕಾರ್ಯದರ್ಶಿ ಸತೀಶ್ ಎನ್. ಬಂಗೇರ ನಗದು ಬಹುಮಾನ ಸ್ವೀಕೃತರ ಹಾಗೂ ಶಾರದಾ ಯು. ಅಂಬೆಸಂಗೆ ಪ್ರಮಾಣಪತ್ರ ಪುರಸ್ಕೃತರ ಪಟ್ಟಿ ವಾಚಿಸಿದರು. ಗೌರವ ಜೊತೆ ಕಾರ್ಯದರ್ಶಿ ಸೋಮನಾಥ ಕರ್ಕೇರ ಕಾರ್ಯಕ್ರಮ ನಿರೂಪಿಸಿದರು. ಗೌರವ ಕೋಶಾಧಿಕಾರಿ ಸುಧಾಕರ್ ಸಿ. ಪೂಜಾರಿ ವಂದಿಸಿದರು.

(ಆಧಾರ : ಉದಯವಾಣಿ)

*PAGE DONATED BY : **SMT. TRIVENI BHATSHIKAR & SHRI R. T. BHATSHIKAR,** GHATKOPAR IN THE MEMORY OF **LATE SHRI T. R. BHATSHIKAR***

'Havyaka Sandesha' August 2018

RNI NO. MAHBIL / 2000 / 746,
Postal R.NO. MCN/161/2018-2020
WPP License No. MR / Tech / WPP-130 / North / 2018
'Licence to post without prepayment'

Posted at Mumbai Patrika Channel Stg. Office Mumbai - 400 001
Date of Publication : 1st of every month

REGISTERED NEWSPAPER

Date of Posting :
2nd, 3rd of every month

If undelivered, please return to :
HAVYAKA WELFARE TRUST
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
E-mail : havyakamumbai@hotmail.com
Visit : www.havyakamumbai.com

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

To,

ಶ್ರೀ ರಾಘವೇಶ್ವರ ಶ್ರೀಗಳ ಗೋಸ್ವರ್ಗ ಸಂವಾದ ಕಾರ್ಯಕ್ರಮ
ನಮ್ಮ ಸಂಸ್ಕೃತಿಗೆ ಕತ್ತಲು ಆವರಿಸಿದಂತಾಗಿದೆ - ಶ್ರೀ ರಾಘವೇಶ್ವರ ಭಾರತಿ ಸ್ವಾಮೀಜಿ

ನಮ್ಮ ದೇಶವು ಸಂಸ್ಕಾರ-ಸಂಸ್ಕೃತಿಭರಿತವಾಗಿದ್ದರೂ ಎಲ್ಲವೂ ಇದ್ದರೂ ಪ್ರಯೋಜನವಿಲ್ಲದಂತೆ ಕಣ್ಣ ಮುಂದೆ ಕತ್ತಲು ಆವರಿಸಿದೆ. ಪಾಶ್ಚಿಮಾತ್ಯ ದೇಶಗಳ ಅನುಕರಣೆಗೆ ನಾವು ನಮಗೆ ಗೊತ್ತಿಲ್ಲದಂತೆ ಸಿಲುಕಿದ್ದೇವೆ. ನಮ್ಮ ಸಂಸ್ಕೃತಿಗೆ ಕತ್ತಲು ಆವರಿಸಿದಂತಾಗಿದೆ ಎಂದು ಹೊಸನಗರ ಶ್ರೀ ರಾಮಚಂದ್ರಾಪುರ ಮಠದ ಶ್ರೀ ಗೋಕರ್ಣ ಮಂಡಲಾಧೀಶ್ವರ ಶ್ರೀ ರಾಘವೇಶ್ವರ ಭಾರತಿ ಶ್ರೀಗಳು ಆಶೀರ್ವಾದದ ನುಡಿಗಳನ್ನಾಡಿದರು.

ಅವರು ಜುಲೈ 1ರಂದು ಕುರ್ಲಾ ಪೂರ್ವದ ಬಂಟರ ಭವನದಲ್ಲಿ ದೇಶೀ ಗೋವುಗಳ ಸಂವರ್ಧನ ಮಹಾ ಅಭಿಯಾನದ ಕುರಿತು ಜಾಗೃತಿ ಮೂಡಿಸುವ ಗೋಸ್ವರ್ಗ ಸಂವಾದ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡುತ್ತಿದ್ದರು.

ತಾಯಿಗೆ ಸಮಾನಳಾಗಿರುವ ಗೋಮಾತೆಯನ್ನು ರಕ್ಷಿಸಿ, ಬೆಳೆಸಿ ಉಳಿಸುವ ಹೈಟೆಕ್ ಮಾದರಿಯ ಗೋಶಾಲೆ ನಿರ್ಮಾಣಗೊಂಡಿದ್ದ ಸಿದ್ದಾಪುರ ಬಾನ್ಕುಳಿ ಈ ಪ್ರದೇಶದಲ್ಲಿ ಗೋವನ್ನು ರಕ್ಷಿಸುವುದಕ್ಕಾಗಿ ಮತ್ತು ಗೋವುಗಳ ಆರೋಗ್ಯದ ಬಗ್ಗೆ ದೊಡ್ಡ ಮಟ್ಟದಲ್ಲಿ ಸೇವಾ ಕಾರ್ಯ ಪ್ರಾರಂಭಗೊಂಡಿದೆ. ಗೋಮಾತೆ ಮಾನವ ಕುಲವನ್ನು ಆರೋಗ್ಯವನ್ನಾಗಿಸುವಂತಹ ಔಷಧೀಯ ಗುಣಗಳನ್ನು ಹೊಂದಿದೆ. ಉತ್ತರ ಭಾರತ ಶ್ರೀರಾಮನ ಪುಣ್ಯಭೂಮಿ. ದಕ್ಷಿಣ ಭಾರತದವರು ಶ್ರೀ ರಾಮನ ಸೇವಕರು ಆಗಿದ್ದರು. ಅಂತೆಯೇ ಸೇವೆಯಲ್ಲಿ ತೊಡಗಿರುವ ದಕ್ಷಿಣ ಭಾರತೀಯರು, ಗೋಮಾತೆಯನ್ನು ರಕ್ಷಿಸುವ ಕಾಯಕದಲ್ಲಿ ತೊಡಗಿಕೊಂಡಿರುವ ಗೋಸ್ವರ್ಗದಲ್ಲಿ ಪಾಲುದಾರರಾಗಿ ಗೋವನ್ನು ರಕ್ಷಿಸುವುದಕ್ಕೆ ಸೇವಕರಾಗಿರಬೇಕು ಎಂದು ನುಡಿದರು.

ವೇದಿಕೆಯಲ್ಲಿ ಆರೆಸ್ಸೆಸ್‌ನ ಉಡುಪಿ ಜಿಲ್ಲಾ ಸಂಚಾಲಕ ಶಂಭು ಶೆಟ್ಟಿ, ರಾಮಚಂದ್ರಾಪುರ ಮಠದ ಮುಂಬಯಿ ವಲಯದ ಅಧ್ಯಕ್ಷ ಕೃಷ್ಣ ಭಟ್, ಕಾರ್ಯಕ್ರಮದ ರೂವಾರಿಗಳಾದ ಪ್ರಕಾಶ್ ಭಟ್, ಈಶ್ವರಿ ಪ್ರಕಾಶ್ ಭಟ್, ಉಷಾ ಭಟ್, ಮನೋರಂಜನಿ ರಮಣ ಭಟ್, ಉದ್ಯಮಿ, ಬಂಟರ ಸಂಘದ ಜ್ಞಾನ ಮಂದಿರದ ಕಾರ್ಯಾಧ್ಯಕ್ಷ ರವೀಂದ್ರನಾಥ್ ಭಂಡಾರಿ, ಭಗೀರಥ ಕೆಮಿಕಲ್ಸ್‌ನ ಮಾಲಕ ಬಾಲಕೃಷ್ಣ ಭಂಡಾರಿ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಪ್ರಕಾಶ್ ಭಟ್ ಸ್ವಾಗತಿಸಿದರು. ಪತ್ರಕರ್ತ ದಯಾಸಾಗರ್ ಚೌಟ ಕಾರ್ಯಕ್ರಮ ನಿರೂಪಿಸಿ ಧನ್ಯವಾದವಿತ್ತರು. ಜ್ಯೋತಿ ಭಟ್ ಪ್ರಾರ್ಥಿಸಿದರು. ಪ್ರಾರಂಭದಲ್ಲಿ ಬಂಟರ ಸಂಘದ ಪದಾಧಿಕಾರಿಗಳು ಸ್ವಾಮೀಜಿ ಅವರನ್ನು ಗೌರವಿಸಿದರೆ, ನಂತರ ಮಹಾನಗರದ ವಿವಿಧ ಜಾತಿಯ ಸಂಘಟನೆಗಳ ಪದಾಧಿಕಾರಿಗಳು ಶ್ರೀಗಳನ್ನು ಫಲಪುಷ್ಪ ನೀಡಿ ಗೌರವಿಸಿದರು.

ಹವ್ಯಕ ವೆಲಫೇರ್ ಟ್ರಸ್ಟಿನ ಪದಾಧಿಕಾರಿಗಳು ಶ್ರೀಗಳನ್ನು ಗೌರವಿಸಿ ಆಶೀರ್ವಾದವನ್ನು ಪಡೆದರು. ಮಧ್ಯಾಹ್ನದಿಂದ ಬೆಂಗಳೂರಿನ ಹೆಸರಾಂತ ಗಾಯಕ, ನಿರ್ದೇಶಕ ಶಂಕರ್ ಶಾನ್‌ಭಾಗ್ ಅವರಿಂದ ಭಜನಾ ಕಾರ್ಯಕ್ರಮ, ಕಲಾಸೌರಭದ ಸಂಯೋಜನೆಯಲ್ಲಿ ನಡೆಯಿತು.

*PAGE DONATED BY : **K. C. & CO., SHRI K. C. HEGDE,** BORIVALI, **ONIKERI (BENGLE) & FAMILY***